## ಫೈಲೊಳಗೆ ಹಸಿರು ಹಾವು!

‘ಹಾವು ಬಂತಲೇ ಹಾವು’ (ಅ. 31, ರೂಪಾ ಜೋಶಿ) ಮಂದಹಾಸ ಓದುತ್ತಿದ್ದಂತೆ ಘಟನೆಯೊಂದು ನೆನಪಿಗೆ ಬಂತು. ನಾನು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾಗ ಹಾವೊಂದು ಒಳಗೆ ಬಂದಿದ್ದನ್ನು ಗಮನಿಸಿದ ಗ್ರಾಹಕರೊಬ್ಬರು ‘ಹಾವ್ ಸಾರ್ ಹಾವ...’ ಎಂದು ಕೂಗಿದರು. ಸಿಬ್ಬಂದಿಯೆಲ್ಲ ಬೆಂಚಿನ ಮೇಲೆ, ಟೇಬಲ್ ಮೇಲೆ ಹತ್ತಿದರು. ಯಮುನಪ್ಪ ಎಂಬಾತ ಒಡಗಿ ಹಿಡಿದು ಎಷ್ಟು ಹುಡುಕಿದ್ರೂ ಸಿಗಲಿಲ್ಲ. ಮರುದಿನ ಫೈಲೊಂದನ್ನು ತೆಗೆದಾಗ ಅದರಲ್ಲಿ ಹಸಿರು ಹಾವು ಬೆಚ್ಚಗೆ ಮಲಗಿತ್ತು. ಅದನ್ನು ಕಂಡೊಡನೆ ಫೈಲನ್ನು ದೂರಕ್ಕೆ ಎಸೆದಾಗ ಸರಸರನೆ ಗಿಡದ ಸಂದಿ ಸೇರಿತು.

–ರಘುನಾಥರಾವ್ ತಾಪ್ಸೆ, ದಾವಣಗೆರೆ



## ಎಂಥ ಫಜೀತಿ!

ಅಚ್ಚ ಹುಬ್ಬಳ್ಳಿ–ಧಾರವಾಡ ಸೀಮೆಯ ಆಡುಗನ್ನಡದಲ್ಲಿ ಹಾವು ಕಂಡಾಗ ಮನುಷ್ಯ ಸಹಜ ಭಯ, ಪುಕ್ಕಟೆ ಸಲಹೆ, ಗುಂಪಿನಲ್ಲಿಯ ಒಬ್ಬೊಬ್ಬರ ತುಮುಲಗಳನ್ನು ಸುಂದರವಾಗಿ ನಿರೂಪಿಸಿದ್ದಾರೆ. ಮಗುವಿನ ಯಃಕಶ್ಚಿತ್ ಒಂದು ಆಟಿಕೆ ವಸ್ತು ಎಂತಹ ಫಜೀತಿಯುಂಟು ಮಾಡಿತು!.

–ಕೇಶವಪ್ರಭು, ಶಿವಮೊಗ್ಗ




## ಕುತೂಹಲಕಾರಿ ‘ದೀಪಾವಳಿ’

‘ದೀಪಾವಳಿ; ವಿಜ್ಞಾನದ ಪ್ರಭಾವಳಿ’ (ಅ. 31, ಡಾ. ಬಿ.ಆರ್. ಗುರುಪ್ರಸಾದ್) ಲೇಖನ ಮಾಹಿತಿಪೂರ್ಣವಾಗಿದೆ. ದೀಪಾವಳಿ ಹಬ್ಬದ ಸಂಭ್ರಮದೊಂದಿಗೆ, ಕೆಲವು ಕುತೂಹಲಕಾರಿ ವೈಜ್ಞಾನಿಕ ಸಂಗತಿಗಳನ್ನು ತಿಳಿಸಿಕೊಟ್ಟಿದೆ. ಜೊತೆಗೆ ಹಬ್ಬದ ನೆಪದಲ್ಲಿ ನಾಗರಿಕರಾದವರು ಮರೆಯಬಾರದ ಪರಿಸರ ಕಾಳಜಿಯ ಹೊಣೆಗಾರಿಕೆ ಕುರಿತೂ ಮಾತನಾಡಿದೆ.

ಗನ್ ಪೌಡರ್‌ಗಳು, ಬಿರುಸು ಬಾಣಗಳು, ರಾಕೆಟ್‌ಗಳ ವೈಜ್ಞಾನಿಕ ಹಿನ್ನೆಲೆಯ ಹಲವು ವೈಜ್ಞಾನಿಕ ಮಾಹಿತಿಗಳು ಆಸಕ್ತಿದಾಯಕವಾಗಿದ್ದವು. ಪಟಾಕಿಗಳ ಪರಿಣಾಮ, ಹಸಿರು ಪಟಾಕಿಗಳು, ದೀಪಾವಳಿಯೊಂದಿಗೆ ತಳುಕು ಹಾಕಿಕೊಂಡಿರುವ ಅಧ್ಯಾತ್ಮ, ಹೀಗೆ ಪ್ರತಿ ವಿಚಾರವೂ ಕುತೂಹಲ ಮೂಡಿಸಿತು. ಸಕಾಲಿಕ ಲೇಖನ.

–ಸರಳಾ ಎಸ್., ಹಾಸನ



## ಮಗಳ ತಲ್ಲಣ!

‘ದೀಪದ ಕೆಳಗೆ’ (ಅ. 31, ಟಿ.ಎಸ್. ಶ್ರವಣಕುಮಾರಿ) ಕಥೆ ಮಾರ್ಮಿಕವಾಗಿದೆ. ಬೇರೆಯವರ ಕುರಿತು ಕೇಳಿದ ಗಾಳಿಸುದ್ದಿಗೆ ತಲ್ಲಣಿಸಿದ ಮಗಳಿಗೆ ತಾಯಿಯ ವಾಸ್ತವ ತಿಳಿದಾಗ ಹೇಗಾಗಿರಬೇಕು? ನಿರೂಪಣೆ ಆಪ್ತವಾಗಿದೆ.

–ಜೆ.ಎನ್. ಜಗನ್ನಾಥ್, ಬೆಂಗಳೂರು

## ಕಾಂಡ್ಲಾ ಕೊಡುಗೆ

‘ಗಾಳಿ ಬೇರುಗಳ ಕಾಂಡ್ಲಾ ಕಾಡು’ (ಅ. 31, ಕೆ. ಪುಟ್ಟರಾಜು) ಲೇಖನ ಕಾಂಡ್ಲಾ ಕುರಿತು ಸಮಗ್ರ ಮಾಹಿತಿ ನೀಡಿದೆ. ಪರಿಸರಕ್ಕೆ ಅವುಗಳ ಕೊಡುಗೆ ಅನನ್ಯ. ಅಭಿವೃದ್ಧಿ ನೆಪದಲ್ಲಿ ಅಮೂಲ್ಯ ಜೀವವೈವಿಧ್ಯವನ್ನು ಹಾಳುಗೆಡುತ್ತಿರುವ ಮಾನವನನ್ನು ಏನೆಂದು ಕರೆಯಬೇಕು?

–ಶಶಿಧರ ಎಲೆ, ಬೆಂಗಳೂರು

## ಆಗೋದೆಲ್ಲಾ ಒಳ್ಳೇದಕ್ಕೆ!

‘ಕಾಲಾಯ ತಸ್ಮೈ ನಮಃ’ (ಅ. 17, ಸಿ.ಎನ್. ಮುಕ್ತಾ) ಕಥೆ ಇಷ್ಟವಾಯಿತು. ಕಾಲಾಂತರದಲ್ಲಿ ಬದಲಾಗುವ ಮೌಲ್ಯಗಳನ್ನು ಆಗೋದೆಲ್ಲಾ ಒಳ್ಳೇದಕ್ಕೇ ಅಲ್ವಾ ಎಂದು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆಯನ್ನು ಉಪಮೆ, ಉತ್ಪ್ರೇಕ್ಷೆಗಳಿಲ್ಲದೆ ಸರಳವಾಗಿ ನಿರೂಪಿಸಲಾಗಿದೆ.

–ಸಂಗಪ್ಪ ಎ., ಮೈಸೂರು

## ಸಮದರ್ಶಿತ್ವ ಅವಲೋಕನ



‘ದೈವತ್ವಕ್ಕೆ ತೇರ್ಗಡೆಯಾದ ಮಾನವ ರತನ್ ಟಾಟಾ’ (ಅ. 31, ಎಂ.ಎಸ್. ಶ್ರೀರಾಮ್) ರತನ್ ಟಾಟಾ ಅವರ ಜೀವನದ ಬಗ್ಗೆ ಒಂದು ಉತ್ತಮ ಸಮದರ್ಶಿತ್ವದಿಂದ ಕೂಡಿದ ಅವಲೋಕನ. ಅವರ ಯಶಸ್ಸನ್ನು ಮಾತ್ರವಲ್ಲದೆ ವೈಫಲ್ಯಗಳನ್ನು ಸಹ ತಿಳಿಸಿದೆ. ಕಾರ್ಪೊರೇಟ್ ಜಗತ್ತಿನಲ್ಲಿ ಉನ್ನತ ಸ್ಥಾನ ಪಡೆಯುವುದರ ಜೊತೆಗೆ ಮಾನವೀಯ ಗುಣಗಳಿಂದ ಜನರ ಹೃದಯದಲ್ಲಿ ನೆಲೆಸಿದವರು. ದೇಶಭಕ್ತರು, ಉನ್ನತ ವ್ಯಕ್ತಿತ್ವದ ರತನ್ ಟಾಟಾ ಅವರು ‘ಭಾರತರತ್ನ’ ಪ್ರಶಸ್ತಿಗೆ ಅರ್ಹರಾಗಿದ್ದರು.

–ಹಿ.ಶಾ. ಸುಬ್ರಹ್ಮಣ್ಯ, ಬೆಂಗಳೂರು

## ಸರಳ, ಸಜ್ಜನಿಕೆಯ ಪ್ರತೀಕ

ರತನ್ ಟಾಟಾ ಅವರ ಕುರಿತ ಸವಿಸ್ತಾರ ನುಡಿ ನಮನ ಓದುವಾಗ ಭಾವೋದ್ವೇಗ ಹಾಗೂ ಸಂಕಟವಾಯಿತು. ಟಾಟಾ ಕುಟುಂಬವೇ ಪೋಷಿಸಿದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಮುಖ್ಯ ಭದ್ರತಾಧಿಕಾರಿಯಾಗಿ ಮೂರು ದಶಕದಲ್ಲಿ ಅವರನ್ನು ಹತ್ತಿರದಿಂದ ನೋಡಿದ ಹಲವು ಸಂದರ್ಭದಲ್ಲಿ ಅವರ ಸರಳ, ಸಜ್ಜನಿಕೆ, ಮೃದು ಭಾಷೆ ಮತ್ತು ಮಾನವೀಯ ಗುಣಗಳು ಅವಿಸ್ಮರಣೀಯ. ವಾಹನಗಳ ಪ್ರತಿ ಭಾಗದ ಕುರಿತು ಅವರಿಗಿದ್ದ ತಾಂತ್ರಿಕ ಪರಿಣತಿ ಆಶ್ಚರ್ಯ ಮೂಡಿಸುತ್ತಿತ್ತು. ಸಂಸ್ಥೆಗೆ ಬಂದಾಗ ಸುಮಾರು ನಾಲ್ಕು ಗಂಟೆ ವಿಜ್ಞಾನಿಗಳೊಂದಿಗೆ ಇರುತ್ತಿದ್ದ ಸಮಯದಲ್ಲಿ ಒಂದು ಬಾರಿಯೂ ಅವರು ಮೊಬೈಲ್ ಉಪಯೋಗಿಸಿದ್ದು ಅಥವಾ ಮಾತನಾಡಿದ್ದು ನಾವು ನೋಡೇ ಇಲ್ಲ, ಸದಾ ಹಸನ್ಮುಖಿಯಾಗಿದ್ದರು. ಅವರ ಜೀವನಚರಿತ್ರೆ ಮಕ್ಕಳಿಗೆ ಸ್ಫೂರ್ತಿ ತುಂಬಲಿ .

–ಎಂ.ಆರ್. ಚಂದ್ರಶೇಖರ್

## ಧೀಮಂತ ವ್ಯಕ್ತಿ

ರತನ್ ಟಾಟಾ, ಮೇರು ಸದೃಶ ವ್ಯಕ್ತಿ. ಅಪಾರ ಸಂಪತ್ತಿನ ಒಡೆಯರಾಗಿಯೂ, ಅವರ ಸರಳ, ಸಜ್ಜನಿಕೆಯ ಗುಣ ಮೆಚ್ಚುವಂತಹುದು.

–ಪ್ರಭಾಪ್ರಸಾದ್, ಬೆಂಗಳೂರು

## ಮಹಾನ್ ನಾಯಕ

ಜನಸಾಮಾನ್ಯರೂ ಮೆಚ್ಚಿದ ಮಹಾನ್ ನಾಯಕನ ಕುರಿತ ಲೇಖನ ಅತ್ಯದ್ಭುತ.

–ಶಾಂತಾರಾಮ ನಾಯ್ಕ, ಹೊನ್ನಾವರ

ಮಾನವೀಯ ಮೌಲ್ಯಗಳ ನಾಯಕನಿಗೆ ದೇಶದ ಅತ್ಯುನ್ನತ ನಾಗರಿಕ ಸನ್ಮಾನ ಭಾರತರತ್ನ ನೀಡದಿದ್ದುದು ತುಂಬಾ ಬೇಸರ ತಂದಿತು.

– ಸಿ. ಶಾಂತಾ ನಾಯರ್, ಶಿವಮೊಗ್ಗ

ತಮ್ಮ ಜೀವನದಲ್ಲಿ ಬಹಳಷ್ಟು ಕಹಿ ಉಂಡರೂ, ತಮ್ಮನ್ನು ನಂಬಿದ ಕೋಟ್ಯಂತರ ಜನರಿಗೆ ದಾರಿದೀಪವಾಗಿ, ಮಾನವೀಯತೆ ಮೆರೆದಿದ್ದಾರೆ. ಅವರ ಸಾಧನೆ, ವ್ಯಕ್ತಿತ್ವ ಅನುಕರಣೀಯ.

–ವಸುಂಧರಾ ಸತ್ಯ, ದೊಡ್ಡಬಳ್ಳಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in